4	4 ಸದಸ್ಯ	16 ಕೆಜಿ	4 ಕೆಜಿ
5	5 ಮತ್ತು ಅದಕ್ಕಿಂತ ಮೇಲ್ಪಟ್ಟ ಸದಸ್ಯ	20 ಕೆಜಿ	5 ಕೆಜಿ

ಆ) ಹಾಗಿದ್ದಲ್ಲಿ, ಇದರಿಂದ ಬಡ ಕುಟುಂಬಗಳಿಗೆ ತೊಂದರೆಯಾಗುವುದಿಲ್ಲವೇ,

ತೊಂದರೆಯಾಗುವುದಿಲ್ಲ

ಇ) ಪಡಿತರ ಆಹಾರ ಪದಾರ್ಥಗಳನ್ನು ಬಡವರು ತೆಗೆದುಕೊಳ್ಳುವುದರಿಂದ ಹಾಗೂ ಒಂದೊಂದು ಕುಟುಂಬಗಳಲ್ಲಿ 5 ಕ್ಕಿಂತ ಹೆಚ್ಚು ಜನರಿರುವುದರಿಂದ, ಈ ಹೊಸ ನೀತಿಯನ್ನು ಹಿಂದಕ್ಕೆ ಪಡೆಯಲಾಗುವುದೇ?

ಬಹುತೇಕ ಬಡ ಕುಟುಂಬಗಳು ಗ್ರಾಮಾಂತರ ಪ್ರದೇಶದಲ್ಲಿ ಎಸ್‌ಜಿಆರ್‌ವೈ ಯೋಜನೆಯಡಿ ಮತ್ತು ಸಮಗ್ರ ಗ್ರಾಮೀಣಾಭಿವೃದ್ಧಿ ಯೋಜನೆಯಡಿ ನೊಂದಾಯಿತ ಬಿಪಿಎಲ್ ಕುಟುಂಬಗಳೇ ಆಗಿದ್ದು ಇವರುಗಳು ಸದರಿ ಯೋಜನೆಯಿಂದ ಪಡೆಯುವ ಆಹಾರಧಾನ್ಯವನ್ನು ಉಪಯೋಗಿಸುವುದರಿಂದ ಸಾರ್ವಜನಿಕ ವಿತರಣಾ ವ್ಯವಸ್ಥೆಯಡಿಯ ಆಹಾರಧಾನ್ಯ ಎತ್ತುವಳಿಯಾಗುವ ಪ್ರಮಾಣ ಕಡಿಮೆಯಾಗಿರುತ್ತದೆ ಇದರಿಂದಾಗಿ ನ್ಯಾಯಬೆಲೆ ಅಂಗಡಿಯವರು ಇದರ ಲಾಭ ಪಡೆಯುವುದನ್ನು ತಪ್ಪಿಸಿದಂತಾಗುತ್ತದೆ ಬಡ ಕುಟುಂಬಗಳಿಗಾಗಿಯೇ ರಾಜ್ಯದ ಮತ್ತು ಕೇಂದ್ರ ಸರ್ಕಾರದ ಯೋಜನೆಗಳು ರೂಪಿತವಾಗಿರುವುದರಿಂದ ಈ ನೀತಿಯನ್ನು ತೆಗೆದು ಹಾಕುವ ಅಗತ್ಯವಿಲ್ಲ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ **1297(1763)**
ಸದಸ್ಯರ ಹೆಸರು **ಶ್ರೀ ಸೋಮಣ್ಣ ವಿ (ಬಿನ್ನಿಪೇಟೆ)**
ಉತ್ತರಿಸುವ ಸಚಿವರುಟ **ಶ್ರೀ ಗೋವಿಂದ ಎಂ ಕಾರಜೋಳ**
(ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಸಚಿವರು)

ಅ) ರಾಜ್ಯದಲ್ಲಿ ಅರ್ಹ ಬಡತನ ರೇಖೆಗಿಂತ ಕೆಳಗಿರುವ ಕುಟುಂಬಗಳೆಷ್ಟು,

ರಾಜ್ಯದಲ್ಲಿ ಪ್ರಸ್ತುತ ಬಡತನ ರೇಖೆಗಿಂತ ಕೆಳಗಿರುವ ಕುಟುಂಬಗಳಿಗೆ ವಿತರಿಸಿರುವ ತಾತ್ಕಾಲಿಕ ಪಡಿತರ ಕೂಪನ್ ಹಾಗೂ ಬೆಂಗಳೂರು ಅಪ ಪ್ರದೇಶ ಹಾಗೂ ಬೆಂಗಳೂರು ನಗರ ಜಿಲ್ಲೆಯ 7 ನಗರಸಭೆ ಸೇರಿಕೊಂಡು ಈ ವಿವರ ಕೆಳಕಂಡಂತಿದೆ

ಎಎವೈ – 11,75,912
ಬಿಪಿಎಲ್ – 53,87,103

ಅನ್ನಪೂರ್ಣ – 25,452
ಒಟ್ಟು – 65,88,967

ಆ) ಈ ಎಲ್ಲಾ ಕುಟುಂಬಗಳಿಗೆ ಬಿಪಿಎಲ್ ಕಾರ್ಡ್ ವಿತರಿಸಲು ವಿಳಂಬವಾಗಿರುವುದಕ್ಕೆ ಕಾರಣಗಳೇನು,

ಮನೆ ಮನೆ ಸಮೀಕ್ಷೆಯಲ್ಲಿ ಗುರುತಿಸಲಾದ ಫಲಾನುಭವಿಗಳಿಗೆ ಅರ್ಹತೆಗೆ ಅನುಗುಣವಾಗಿ ಅನ್ನಪೂರ್ಣ, ಅಂತ್ಯೋದಯ, ಬಿಪಿಎಲ್ (ಅಕ್ಷಯ) ತಾತ್ಕಾಲಿಕ ಪಡಿತರ ಕೂಪನ್‌ಗಳನ್ನು ವಿತರಿಸಲಾಗಿರುತ್ತದೆ ತಾತ್ಕಾಲಿಕ ಪಡಿತರ ಚೀಟಿ ವಿತರಣೆಯಲ್ಲಿ ಹಲವು ರೀತಿಯ ಲೋಪದೋಷಗಳು ಅಂದರೆ ನ್ಯಾಯಬೆಲೆ ಅಂಗಡಿ ಬದಲಾವಣೆ, ಪಡಿತರ ಚೀಟಿಯಲ್ಲಿ ಹೊಸ ಕುಟುಂಬ ಸದಸ್ಯರ ಸೇರ್ಪಡೆ, ಪಡಿತರ ಚೀಟಿಯಲ್ಲಿ ಕುಟುಂಬ ಸದಸ್ಯರ ತೆಗೆದುಹಾಕುವ ಬಗ್ಗೆ, ಕುಟುಂಬದ ಮುಖ್ಯಸ್ಥರ ಬದಲಾವಣೆ, ಇತರೇ ಯಾವುದೇ ರೀತಿಯ ಅಹವಾಲುಗಳು, ತಿದ್ದುಪಡಿಗಳು, ವರ್ಗ ಬದಲಾವಣೆ ಕೋರಿರುವ ಅಹವಾಲುಗಳ ಜೊತೆಗೆ ಹೊಸದಾಗಿ ಪಡಿತರ ಚೀಟಿ ಕೋರಿರುವ ಅಹವಾಲುಗಳು ವರದಿಯಾಗಿದ್ದು, ಈ [illegible] ಸಾರ್ವಜನಿಕರಿಂದ 64 70 ಲಕ್ಷ ಅಹವಾಲುಗಳನ್ನು ಸ್ವೀಕರಿಸಲಾಗಿದ್ದು, ಇ[illegible] 70 ಲಕ್ಷ ವರ್ಗ ಬದಲಾವಣೆಗಾಗಿ 41 36 ಲಕ್ಷ ಹೊಸ ಪಡಿತರ ಚೀಟಿಗಾಗಿ, 7 64 ಲಕ್ಷ ಇತರೆ ಅಹವಾಲುಗಳಿದ್ದು, ಅವುಗಳ ಪರಿಶೀಲನೆ ಕಾರ್ಯ ಮುಕ್ತಾಯವಾಗಿದೆ

ಇ) ಎಲ್ಲಾ ಅರ್ಹ ಕುಟುಂಬಗಳಿಗೆ ಬಿಪಿಎಲ್ ಕಾರ್ಡ್‌ಗಳನ್ನು ಯಾವಾಗ ಹಂಚಿಕೆ ಮಾಡಲಾಗುವುದು

ಸಾರ್ವಜನಿಕರಿಂದ ಸ್ವೀಕರಿಸಲಾಗಿರುವ ಅಹವಾಲುಗಳ ಪೂರ್ಣ ವಿಲೇವಾರಿಯ ನಂತರ ತಾತ್ಕಾಲಿಕ ಪಡಿತರ ಚೀಟಿಗಳ ವಿತರಣೆಗೆ ಕ್ರಮ ಕೈಗೊಳ್ಳಲಾಗುವುದು ನಂತರ ಖಾಯಂ ಪಡಿತರ ಚೀಟಿಯನ್ನು ನೀಡಲಾಗುವುದು, ಮೇಲ್ಕಂಡ ಕಾರ್ಯಕ್ರಮಕ್ಕೆ ಕನಿಷ್ಟ 6 ತಿಂಗಳ ಕಾಲಾವಕಾಶ ಬೇಕಿರುತ್ತದೆ